ಶ್ರೀ ರಾಮಕೃಷ್ಣ ಹೆಗ್ಡೆ.— ಈ ಬಗ್ಗೆ ನನಗೆ ದೂರು ಬಂದ ತಕ್ಷಣವೇ ನಾನು ಆ ಸಮಿತಿಯನ್ನು ರದ್ದು ಪಡಿಸಿರುವುದೇ ಮೊದಲ ಕ್ರಮ. ಆ ನಂತರ ಭ್ರಷ್ಟಾಚಾರದ ಬಗ್ಗೆ ಬಂದ ಆ ದೂರುಗಳನ್ನು ಉಪಲೋಕಾಯುಕ್ತಕ್ಕೆ ತನಿಖೆಗಾಗಿ ಕಳುಹಿಸಿಕೊಟ್ಟಿದ್ದೇನೆ. ಇದು ಒಂದೇ ಕಮಿಟಿ ಅಲ್ಲ. ಇನ್ನೂ ಎರಡು-ಮೂರು ನೇಮಕಾತಿ ಕಮಿಟಿ ಸದಸ್ಯರ ವಿರುದ್ಧ ದೂರುಗಳು ಬಂದಿತ್ತು. ಅವಕ್ಕೂ ಇದೇ ರೀತಿಯ ಗಮನ ತೆಗೆದುಕೊಂಡಿದ್ದೇವೆ.

ಶ್ರೀ ಕೆ.ಎಚ್. ಪಾಟೀಲ್ — ಯೋಗ್ಯವಾದ ಕ್ರಮ ಆದು. ಯೋಗ್ಯವಾದ ಮಾರ್ಗ ಆದು. ಜೊತೆಗೆ ಇಂತಹ ಭ್ರಷ್ಟಾಚಾರಿಗಳು ಇದ್ದಾರೆಂದು ಸಾರ್ವಜನಿಕರಿಗೆ ಗೊತ್ತಾಗುವುದಕ್ಕಾಗಿ ಇವರುಗಳ ಹೆಸರನ್ನು ಪ್ರಕಟಿಸುವುದಕ್ಕೆ ಇಚ್ಛಿಪಡುತ್ತೀರಾ?

ಶ್ರೀ ರಾಮಕೃಷ್ಣ ಹೆಗ್ಡೆ.— ಈ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರ ಹೆಸರುಗಳು ಮೊದಲೇ ಪ್ರಕಟವಾಗಿವೆ.

ಶ್ರೀ ಕೆ.ಎಚ್. ಪಾಟೀಲ್.— ಯಾರ ಮೇಲೆ ಆರೋಪ ಬಂದಿದೆ ಅವರ ಹೆಸರುಗಳನ್ನು ಪ್ರಕಟ ಪಡಿಸುತ್ತೀರಾ?

ಶ್ರೀ ರಾಮಕೃಷ್ಣ ಹೆಗ್ಡೆ.— ಉಪಲೋಕಾಯುಕ್ತದಿಂದ ತೀರ್ಮಾನ ಬಂದಮೇಲೆ ಇವರುಗಳ ಹೆಸರುಗಳನ್ನು ಪ್ರಕಟಣೆ ಮಾಡುವುದರಲ್ಲಿ ನಮ್ಮದೇನೂ ಅಭ್ಯಂತರವಿಲ್ಲ.

ಆರಕ್ಷಕ ಕಛೇರಿಯಲ್ಲಿ ವಿವಾಹ ನಡೆಯುತ್ತಿರುವುದು

೧೩೮೧. ಶ್ರೀ ಐ.ಬಿ. ಶಂಕರ್ (ಚಿಕ್ಕಮಗಳೂರು).— ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆರಕ್ಷಕ ಠಾಣೆಯಲ್ಲಿ ಹಾಗೂ ಆರಕ್ಷಕ ಕಛೇರಿಯಲ್ಲಿ ವಿವಾಹ ಮಾಡಿಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಸಬ್ ರಿಜಿಸ್ಟ್ರಾರ್ ಕಛೇರಿ ಇದ್ದು ಕೂಡ ಈ ರೀತಿ ಮಾಡಿಸುವುದು ಕಾನೂನು ಬಾಹಿರ ವಲ್ಲವೇ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು).—

ಅ)ವಧುವರರ ತಂದೆ-ತಾಯಿಗಳು ಅಥವಾ ಹಿರಿಯರು ಅಡ್ಡಿ ಪಡಿಸಿದ ವಿಶೇಷ ಪ್ರಕರಣಗಳಲ್ಲಿ ಅವರು ಪೊಲೀಸ್ ಠಾಣೆಯ ಆವರಣದ ಹೊ ಪೂಲೆ ಬದಲಾಯಿಸಿಕೊಳ್ಳಲು ಪೊಲೀಸರು ರಕ್ಷಣೆ ಕೊಡುತ್ತಾರೆ.

ಆ) ಮದುವೆಯನ್ನು ನೊಂದಾಯಿಸಿಕೊಳ್ಳುವುದು ಸಬ್ ರಿಜಿಸ್ಟ್ರಾರ್‌ರವರ ಕಛೇರಿಯ ಕೆಲಸ ವಾದುದರಿಂದ ಪೊಲೀಸರು ಇದನ್ನು ನೋಂದಾಯಿಸಿಕೊಳ್ಳುವುದಿಲ್ಲ.

ಶ್ರೀ ಐ. ಬಿ. ಶಂಕರ್.—ಅಧ್ಯಕ್ಷರೇ, ಈ ಪ್ರಶ್ನೆ ಕೇಳಿದ ಉದ್ದೇಶವೆಂದರೆ, ಕೆಲವರು ಬೇರೆ ಬೇರೆ ಜಿಲ್ಲೆಗಳಿಂದ ನಮ್ಮ ಜಿಲ್ಲೆಗೆ ಬಂದು ಪೋಲೀಸ್ ಠಾಣೆಯಲ್ಲಿ ಈ ರೀತಿ ಮದುವೆ ಆಗಿದ್ದಾರೆ. ಇಂತಹ ದಂಪತಿಗಳು ನಾಳೆ ಸುಖ ಜೀವನ ನಡೆಸಿದರೆ ಸಂತೋಷ. ಆದರೆ ಇಂತಹ ಮದುವೆಗಳಲ್ಲಿ ಯಾವುದೇ ರೀತಿಯ ದಾಖಲೆಗಳು ಇರುವುದಿಲ್ಲ. ಬೇರೆ ಜಿಲ್ಲೆಯಿಂದ ಬಂದು ಈ ರೀತಿ ಮದುವೆ ಆದಂತಹ ವ್ಯಕ್ತಿ ಹೆಣ್ಣನ್ನು ಬಿಟ್ಟರೆ ಕಾನೂನಿಗೆ ಒಳಪಟ್ಟಂತ ಆತನ ಮೇಲೆ ಕ್ರಮ ತೆಗೆದುಕೊಳ್ಳಲು ಯಾವುದೇ ರೀತಿಯ ಕಾಗದಪತ್ರಗಳು ಇರುವುದಿಲ್ಲ. ಆದ್ದರಿಂದ ಇಂತಹ ಸಂದರ್ಭದಲ್ಲಿ ಮದುವೆ ಆದ ನಂತರ ಅವರನ್ನು ಸಬ್-ರಿಜಿಸ್ಟ್ರರ್ ಕಛೇರಿಗೆ ಕಳುಹಿಸಿ ಅಲ್ಲಿ ಇವರ ಹೆಸರನ್ನು ನೋಂದಾಯಿಸತಕ್ಕ ಕಾನೂನು ತರ ಬೇಕಾಗುತ್ತದೆ. ಇದರಿಂದ ಕಾನೂನು ಬದ್ಧವಾಗಿ ಇವರು ದಂಪತಿಗಳು ಆಗುತ್ತಾರೆ. ಇನ್ನೊಂದು ವಿಷಯ ಹೇಳಬೇಕೆಂದರೆ, ಕೆಲವು ಕಡೆ ಪೋಲೀಸರೇ ಫೋರ್ಸ್‌ನಿಂದ ಇಂತಹ ಮದುವೆ ಮಾಡಿಸಬಹುದು ಅಥವಾ ನಾಲ್ಕೈದು ಜನ ಒತ್ತಾಯದಿಂದ ಠಾಣೆಗೆ ಇವರನ್ನು ತಂದು ಮದುವೆ ಮಾಡಿಸಬಹುದು. ತಂದೆ ತಾಯಿಗಳಿಗೆ ವಿರುದ್ಧವಾಗಿ ಆದ ಇಂತಹ ಮದುವೆಗಳಲ್ಲಿ ನಾಳೆ ದಿವಸ ಆ ಹೆಣ್ಣನ್ನು ಬಿಟ್ಟಾಗ

ಪರಿಸ್ಥಿತಿ ಏನಾಗಬಹುದೆಂಬುದನ್ನು ನೋಡಿ. ಇಂತಹ ನಾಲ್ಕಾರು ಘಟನೆಗಳು ಈಗಾಗಲೇ ನಡೆದಿರುವುದರಿಂದ ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇತ್ತೀಚೆಗೆ ಹಾಸನದಿಂದ ಚಿಕ್ಕ ಪಂಗಳೂರಿಗೆ ಬಂದಂ ವಾದುವೆಯಾಗಿ ಆ ನಂತರ ಬಿಟ್ಟ ನಾಲ್ಕೈದು ಪ್ರಸಂಗಗಳು ನಡೆದಿರುವುದರಿಂದ ಈ ವಿಷಯ ಚರ್ಚೆ ಮಾಡುತ್ತಿದ್ದೇನೆ. ಆದ್ದರಿಂದ, ಬೇರೆ ಜಿಲ್ಲೆಯವರು ಬಂದು ಮದುವೆಯಾಗಿ ನಂತರ ಬಿಟ್ಟರೆ ಆಗುವ ಅನಾನುಕೂಲವನ್ನು ಸರಿಪಡಿಸುವುದಕ್ಕೆ ಸರ್ಕಾರ ಏನಾದರೂ ವ್ಯವಸ್ಥೆಯನ್ನು ಮಾಡುತ್ತದೆಯೇ ಎಂದು ನಾನು ಕೇಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಒಬ್ಬ ಹುಡುಗ ಹುಡುಗಿ ಎಲ್ಲಿಬೇಕಾದರೂ ಹೋಗಿ ಬಂದುವೆ ಮಾಡಿಕೊಳ್ಳಬಹುದು. ದೇವಾಲಯಕ್ಕೆ ಹೋಗಿ ದೇವರ ಎದುರಿಗೆ ಮದುವೆ ಮಾಡಿಕೊಂಡು ಹಾರ ಬದಲಾಯಿಸಿಕೊಂಡರೆ ಆವಾಗ ಏನು ಆಗುವುದಿಲ್ಲವೆ? ಪೋಲೀಸ್ ಸ್ಟೇಷನ್‌ನಲ್ಲಿ ಈ ತರಹ ಮದುವೆ ಯಾಗತಕ್ಕೆ ಉದ್ದೇಶ ಏನೆಂದರೆ, ಇದೆಲ್ಲಾ ಪ್ರೇಮ ವಿವಾಹ. ಹುಡುಗ ಹುಡುಗಿ ಪ್ರೀತಿಸಿರುತ್ತಾರೆ. ತಂದೆ ತಾಯಿಗಳಿಗೆ ಇಷ್ಟವಿರುವುದಿಲ್ಲ, ಆದರೆ ಇಬ್ಬರಿಗೂ ಪ್ರೇಮವಿರುತ್ತದೆ ಮದುವೆ ಮಾಡಿಕೊಳ್ಳುವುದಕ್ಕೆ ಇಷ್ಟವಿರುತ್ತದೆ. ಬೇರೆ ಕಡೆಗೆ ಆದರೆ ಹುಡುಗನ ಮೇಲೆ ಆರೋಪ ಹಾಕಿ ಹುಡುಗಿಯನ್ನು ಕದ್ದುಕೊಂಡು ಹೋಗಿದ್ದಾನೆಂದು ಮದುವೆ ತಪ್ಪಿಸುತ್ತಾರೆ ಅದಕ್ಕೋಸ್ಕರ ಅವರು ಪೋಲೀಸ್ ಸ್ಟೇಷನ್‌ನಲ್ಲಿ ಮದುವೆಯಾಗುತ್ತಾರೆ. ಮದುವೆ ಕಡ್ಡಾಯವಾಗಿ ರಿಜಿಸ್ಟರ್ ಆಗಬೇಕೆಂದು ನಾವು ವಿಧಿಸಿದರೆ ಅದು ನಿಲ್ಲಬಹುದು.

ಶ್ರೀ ವೇದಾಂತ ಹೆಮ್ಮಿಗೆ.—ಸಾಮಾನ್ಯವಾಗಿ ಮದುವೆಯಾಗುವ ಸಂದರ್ಭಗಳಲ್ಲಿ ಹಿಂದೂ ಸಂಸ್ಕೃತಿಯ ಪ್ರಕಾರ ಊಟ ಉಪಚಾರ ಮಾಡತಕ್ಕ ವಾಡಿಕೆ ಇದೆ. ಪೋಲೀಸ್ ಸ್ಟೇಷನ್‌ನಲ್ಲಿ ಮದುವೆ ಯಾದಾಗ ಊಟ ಉಪಚಾರವನ್ನು ಮದುವೆ ಮಾಡುವ ಪೋಲೀಸ್‌ನವರು ವಹಿಸುತ್ತಾರೋ ಅಥವಾ ಯಾರು ವಹಿಸಿಕೊಳ್ಳುತ್ತಾರೆ?

ಶ್ರೀ ರಾಮಕೃಷ್ಣ ಹೆಗಡೆ.—ಪೋಲೀಸ್ ಸ್ಟೇಷನ್ ನೆಂಟರ ಮನೆಯಲ್ಲ. ಊಟ ಉಪಚಾರದ ವ್ಯವಸ್ಥೆ ಮಾಡುವುದಕ್ಕೆ ಆಗುವುದಿಲ್ಲ, ಅದನ್ನು ಶುರು ಮಾಡಿದರೆ ಎಲ್ಲಾ ಮದುವೆಗಳು ಅಲ್ಲೇ ಆಗಬಹುದು.

ಶ್ರೀ ಆರ್. ಎನ್. ನಾಯಕ್.—ಪ್ರೇಮ ವಿವಾಹ ಮಾಡಿಕೊಳ್ಳುವ ಹುಡುಗ ಹುಡುಗಿ ರಕ್ಷಣೆ ಪಡೆದುಕೊಳ್ಳುವುದಕ್ಕೆ ಪೋಲೀಸ್ ಸ್ಟೇಷನ್‌ಗೆ ಬರಬೇಕಾಗುತ್ತದೆ. ರಕ್ಷಣೆ ಬೇಡದಿದ್ದರೆ ಬೇರೆ ಕಡೆಗೆ ಮದುವೆ ಮಾಡಿಕೊಳ್ಳುತ್ತಾರೆ. ರಕ್ಷಣೆ ಕೇಳಿ ಪೋಲೀಸ್ ಸ್ಟೇಷನ್‌ಗೆ ಹೋಗುತ್ತಾರೆ. ಪೋಲೀಸ್ ಸ್ಟೇಷನ್‌ನಲ್ಲಿ ಮದುವೆ ಮಾಡಿಕೊಳ್ಳುವುದಕ್ಕೆ ಜಾಗ ಬಹಳ ಚಿಕ್ಕದು ಇರುವುದರಿಂದ ಪಕ್ಕದಲ್ಲಿಯೇ ಒಂದು ಕಲ್ಯಾಣ ಮಂಟಪ ಕಟ್ಟಿಸುವುದಕ್ಕೆ ಆಲೋಚನೆ ಮಾಡುತ್ತೀರಾ? ಆ ತರಹ ಮಾಡಲಿಕ್ಕೆ ಆದೇಶ ಕೊಡುತ್ತೀರಾ ಎಂಬುದನ್ನು ತಿಳಿಸಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಪೋಲೀಸ್ ಸ್ಟೇಷನ್‌ನಲ್ಲಿ ಈ ರೀತಿ ಹೋಗಿ ಮದುವೆ ಮಾಡಿ ಕೊಳ್ಳುವುದು ಬಹಳ ಅಪರೂಪ ದೈನಂದಿಕವಾಗಿ ನಡೆಯತಕ್ಕ ಘಟನೆಯಲ್ಲ. ಆದ್ದರಿಂದ ಅಲ್ಲಿ ಕಲ್ಯಾಣ ಮಂಟಪವನ್ನು ಕಟ್ಟಿಸುವ ಅಗತ್ಯವಿಲ್ಲ. ಅಲ್ಲಿ ಊಟ ಉಪಚಾರದ ವ್ಯವಸ್ಥೆ ಮಾಡುವ ಅಗತ್ಯವೂ ಇಲ್ಲ. ಉದ್ದೇಶ ಇಷ್ಟೆ ವಧು-ವರರ ಮೇಲೆ ಏನಾದರೂ ಆಪಾದನೆ ಮಾಡಿದರೆ ಪೋಲೀಸ್ ಸ್ಟೇಷನ್‌ನಲ್ಲಿ ದಾಖಲೆಯಿರುತ್ತದೆ. ಆ ದೃಷ್ಟಿಯಿಂದ ಅಲ್ಲಿ ಮದುವೆ ಮಾಡಿಕೊಳ್ಳುತ್ತಾರೆ.

ಶ್ರೀ ಜೆ. ಪೆಚ್ ಪಟೇಲ್ —ಪೋಲೀಸ್ ಸ್ಟೇಷನ್‌ನಲ್ಲಿ ಕಲ್ಯಾಣವಾಗುವುದಕ್ಕೆ ವ್ಯವಸ್ಥೆ ಇರುತ್ತದೆಯೇ ವಿನಹ ದಾಂಪತ್ಯ ಜೀವನಕ್ಕೆ ವ್ಯವಸ್ಥೆಯಿರುವುದಿಲ್ಲ.

ಅಧ್ಯಕ್ಷರು.—ಮಾನ್ಯ ಶ್ರೀ ಕೆ. ಹೆಚ್. ಶ್ರೀನಿವಾಸ್‌ರವರೇ ತಮ್ಮ ಪ್ರಶ್ನೆ ಮುಂದೆ ಹೋಗಿದೆ.

ಶ್ರೀ ಕೆ ಹೆಚ್. ಶ್ರೀನಿವಾಸ್.—ಎಷ್ಟು ದೂರ ಮುಂದಕ್ಕೆ ಹೋಗಿದೆ?